# ನವ ನವ್ಯ

ಕೆಲವೊಮ್ಮೆ ನನಗೆ ಅನಿಸುವುದಿದೆ– ಅಡಿಗರ 'ಭಾವತರಂಗ'ಕ್ಕೆ ಬೇಂದ್ರೆ ಅವರು ಬರೆದ ಮುನ್ನುಡಿಯಿಂದಲೇ ಅಡಿಗರ ನವ್ಯದ ಹಾದಿ ತೊಡಗಿತೆಂದು. ಹೇಗೆಂದರೆ ಸಿದ್ಧ ಮಾದರಿಯ ಮಾತುಗಾರಿಕೆಯನ್ನು ಕೇಳಿದ ತತಕ್ಷಣ– ಸೃಜನ ಮನೋಧರ್ಮದ ಮನಸ್ಸುಗಳಿಗೆ– ಮಾತು ಹೊಸದಾಗಬೇಕಾದ ಅಗತ್ಯವು ಕೂಡಲೇ ಹೊಳೆಯುವುದು. ಈ ಮುನ್ನುಡಿ ಬರೆವ ಹೊತ್ತಿನಲ್ಲಿ ದೊಡ್ಡ ಸೃಜನ ಸಂಪತ್ತಿನ ಬೇಂದ್ರೆಯವರಿಗೆ ಹೀಗೇ ಆಯಿತು!' ಒಂದು ಬಗೆಯ ಸಿದ್ಧ ಶೈಲಿಯಿಂದ ನವಕವಿಗಳು ಹೊರಡುತ್ತಾರೆ. ಎಂದು ಬೇಂದ್ರೆ ಮುನ್ನುಡಿಯಲ್ಲಿ ಬರೆದರು. ವಿಶೇಷವೆಂದರೆ, ಅಂಥದೊಂದು ಸಿದ್ಧಶೈಲಿಯನ್ನು ರೂಪಿಸುವಲ್ಲಿ ಬೇಂದ್ರೆಯವರ ಪಾಲಿದೆ ಮತ್ತು ಅವರ ಪಾಲೇ ದೊಡ್ಡದು. ಅಡಿಗರ ಮಟ್ಟಿಗಂತೂ ಬೇಂದ್ರೆಯವರ ಪಾಲು ಇನ್ನಾರಿಗಿಂತಲೂ ದೊಡ್ಡದು. ಇದು ತಿಳಿದಿದ್ದೂ, ಪ್ರಾಯಃ ತಿಳಿದಿರುವುದರಿಂದಲೇ– ಸಿದ್ಧ ಶೈಲಿಯಿಂದಾಗಿ ಮಾತು ಜಡಗೊಳ್ಳುವ ಅಪಾಯದ ಸೂಚನೆ ಬೇಂದ್ರೆಯವರಿಗೆ ಸಿಕ್ಕಿದೆ! ಅಡಿಗರಿಗಿಂತ ಮೊದಲೇ ಸಿಕ್ಕಿದೆ! ಇದು– ತನಗೆ ಬಲಿಯಾಗದಿರು ಎಂದು ದೇವತೆಯೇ ಬಲಿಪಶುವನ್ನು ಎಚ್ಚರಿಸಿದಂತಿದೆ!

ಆ ಮೇಲೆ 'ನಾವೀನ್ಯದ ಅನುಕೂಲ' ಎಂಬ ಅಪೂರ್ವವಾದ ಮಾತು. ಇದೂ ಬೇಂದ್ರೆ ಮುನ್ನುಡಿಯ ಮಾತೇ. ಸಿದ್ಧ ಶೈಲಿಯ ಪ್ರತಿಕೂಲವನ್ನು ಬೇಂದ್ರೆ ಹೀಗೆ ಸೂಚಿಸಿದರು. 'ನಾವೀನ್ಯದ ಅನುಕೂಲ' ಎಂದರೇನು? ಅದು ಎಲ್ಲವನ್ನೂ ಹೊಸದಾಗಿ ನೋಡುವ ಅನುಕೂಲ. ಆ ಮೂಲಕ ತಾನೇ ಹೊಸದಾಗುವ ಅನುಕೂಲ. ಹೊಸತಿನ **Freshness**ನ ಅನುಭವಕ್ಕಿಂತ ದೊಡ್ಡ ಮೌಲ್ಯ ಭಾಷೆಯಲ್ಲಿ ಬೇರೆ ಮೂಡುವುದು ಸಾಧ್ಯವಿಲ್ಲ ಎಂಬ ಅರಿವಾಗುವ ಅನುಕೂಲ. ಸಿದ್ಧ ಯೋಚನೆಗಳು ನಿಖರವಾಗಿ ಕವಿದಿರುವ ಹೊತ್ತಿನಲ್ಲೇ ಭಾಷೆ, ತನ್ನ ಬಿಡುಗಡೆಗೂ ತುಡಿಯುತ್ತಿರುತ್ತದೆ ಎಂಬ ಸೂಕ್ಷ್ಮವನ್ನು ಗ್ರಹಿಸುವ ಅನುಕೂಲ. ಬೇಂದ್ರೆ ನಾವೀನ್ಯದ ಮಾತು ಆಡಿದರು. ಸಾವಿರ ವರ್ಷಗಳ ಹಿಂದಿನ ಪಂಪನೂ ನಾವೀನ್ಯದ ಮಾತಾಡಿದ್ದ. 'ಪೊಸಯಿಸುವುದು', ಹೊಸದಾಗಿಸುವುದು, ಎಂಬುದು ಕನ್ನಡ ನುಡಿಯಲ್ಲಿ ನಮ್ಮ ಆದಿಕವಿ ಆಡಿದ ಮಾತು. ಪಂಪನಿಗಿಂತಲೂ ಸಾವಿರ ವರ್ಷಗಳ ಹಿಂದಿನ ಕಾಳಿದಾಸ, ನವ್ಯ ಕಾವ್ಯದ ಮಾತು ಎತ್ತಿದ್ದ. 'ನಚಾಪಿ ಕಾವ್ಯಂ ನವ ಮಿತ್ಯವದ್ಯಂ' ಎಂದಿದ್ದ. ಹೊಸ ಕಾವ್ಯವೆನ್ನುವ ಕಾರಣಕ್ಕೆ ಹೀಗಳೆಯ ಬೇಕಾದುದಿಲ್ಲವೆಂದಿದ್ದ. ಹೀಗಳೆಯುವವರಿರುತ್ತಾರೆ. ಎಲ್ಲ ಕಾಲದಲ್ಲೂ ಇರುತ್ತಾರೆ. ಇಂಥವರ ಮಾತಿಗೆ ಕಿವಿಗೊಡಬೇಕಿಲ್ಲವೆಂದು ಕಾಳಿದಾಸನೇ ಹೇಳಿದ್ದ. ಅವನಿಗೆ ಸೃಷ್ಟಿಶೀಲತೆಯ ಮರ್ಮ ತಿಳಿದಿತ್ತು.

ಬೇಂದ್ರೆಯವರು ಅಡಿಗರಿಗೆ ನಿಜಕ್ಕೂ ಅನುಕೂಲ ಮಾಡಿಕೊಟ್ಟರು. ಅವರು ಅಡಿಗರನ್ನು ಕುತೂಹಲದಿಂದ ಗಮನಿಸುತ್ತಲೇ ಇದ್ದರು ಅನ್ನಿಸುತ್ತದೆ. ತಮಗೆ ತಿಳಿಯದೇ ಅಡಿಗರಿಂದ ಪ್ರಭಾವಿತರೂ ಆದರೆಂದು ನನಗೆ ಅನ್ನಿಸುತ್ತದೆ. ಅದೇನೆಂದು ತುಸು ತಡೆದು ಹೇಳುವೆ.

ಅಡಿಗರನ್ನು ನಾನು ಇಷ್ಟಪಡುವೆ, ಗೌರವಿಸುವೆ, ಅದೇಕೆಂದರೆ, ತನ್ನ ಸಿದ್ಧಿ, ಪ್ರಸಿದ್ಧಿಗಳನ್ನೇ ಪರಿತ್ಯಾಗ ಮಾಡಿ ಹೊಸ ಹಾದಿ ಹಿಡಿದ ಜೀವಂತಿಕೆಗಾಗಿ. ಅನಂತಮೂರ್ತಿಯವರು ಅಡಿಗರ ಕುರಿತು ಬರೆದ ಈ ಮಾತುಗಳನ್ನು ನಾನು ಪೂರ್ತಿ ಒಪ್ಪುವೆ. 'ಅಡಿಗರಂತೆ ಸತ್ತು ಮರುಹುಟ್ಟು ಪಡೆದ ಕನ್ನಡದ ಕವಿ ಇನ್ನೊಬ್ಬನಿಲ್ಲ ಎಂದರೆ ಅತ್ಯುಕ್ತಿಯಲ್ಲ. ತಾನು ಪಡೆದಿದ್ದ ಮಾತಿನ ಗೇಯತೆಯನ್ನೂ ಇದರಿಂದ ಪಡೆದಿದ್ದ ಜನಾನುರಾಗವನ್ನೂ ತನ್ನ ಆವರೆಗಿನ ಒಟ್ಟು ವಾಕ್ ಸಿದ್ಧಿಯನ್ನೂ ನಿರಾಕರಿಸಿ ಅವರು ತನಗೆ ತಾನೇ ಹೊಸಬರಾದರು.'

ಕೃಷ್ಣನ ವ್ಯಕ್ತಿತ್ವದ ಜೊತೆಗೆ ಕೊಳಲು ಬೆರೆತುಹೋಗಿದೆ– ನಿಜ. ಆದರೆ ಒಂದು ಹಂತದಲ್ಲಿ ಕೃಷ್ಣ ಕೊಳಲನ್ನು ಕೆಳಗಿರಿಸಿದ. ಮತ್ತದನ್ನು ಎತ್ತಿಕೊಳ್ಳಲಿಲ್ಲ. ಅವನು ಕೊಳಲು ನುಡಿಸಿದ್ದೊಂದು ಅದ್ಭುತ. ಕೊಳಲನ್ನು ಕೆಳಗಿರಿಸಿದ್ದೊಂದು ಅದ್ಭುತ. 'ಯಾವ ಮೋಹನ ಮುರಲಿ'ಯ ಕವಿ ಮತ್ತೆಂದೂ ಅಂಥ ಕವಿತೆಯನ್ನು ಬರೆಯದೆ ಇದ್ದುದು– ಬರೆಯಬಲ್ಲವರಾಗಿಯೂ ಬರೆಯದೆ ಇದ್ದುದು– ಅಂಥ ಕವಿತೆಗಳಿಗೆ ಜನ ಹಂಬಲಿಸುತ್ತಿದ್ದಾಗಲೂ, ಅದು ತಿಳಿದಿದ್ದೂ ಬರೆಯದೆ ಇದ್ದುದು– ನವ್ಯ ಕವಿತೆ ಜನಕ್ಕೆ ಸಾಮಾನ್ಯವಾಗಿ ಅರ್ಥವಾಗುವುದಿಲ್ಲ ಎಂದು ಅರಿವಿದ್ದೂ; ಹಾಗಾಗಿ ಅದು ಜನರ ಲೇವಡಿಗೆ ಒಳಗಾಗುತ್ತದೆ ಎಂದಿರುವಾಗಲೂ ಬಿಟ್ಟು ಬಂದ ದಾರಿಗೆ ಮತ್ತೆ ಹಿಂತಿರುಗದೆ ಇದ್ದುದು– 'ಕೀರ್ತಿ ಶನಿ, ತೊಲಗಾಚೆ' ಎಂದು ಹೇಳುವುದು ಸುಲಭ– ಆದರೆ ತನ್ನ ಕೀರ್ತಿಯನ್ನೇ ಅದೊಂದು ಅಪಕೀರ್ತಿ ಎಂಬಂತೆ, ಅಪಕೀರ್ತಿಯಲ್ಲದಿದ್ದರೂ, ಭಾವಿಸುವ ಮಟ್ಟದ ನಿಸ್ಪೃಹತೆಯಲ್ಲಿ ನವ್ಯತೆಗೆ ಹೊರಳಿ ಎಲ್ಲ ಪ್ರತಿಕೂಲಗಳ ನಡುವೆಯೂ ನಾವೀನ್ಯದ ಅನುಕೂಲವನ್ನು ತನ್ನಾತ್ಮದಲ್ಲಿ ಅನುಭವಿಸಿದ್ದಕ್ಕಾಗಿ ನಾನವರನ್ನು ಗೌರವಿಸುವೆ.

ಇನ್ನು ಬೇಂದ್ರೆಯವರು ಪ್ರಭಾವಿತರಾದ ಬಗ್ಗೆ– ಬೇಂದ್ರೆ ಭಾವಗೀತೆಗಳ ಅನನ್ಯ ಕವಿ ಎಂದೇ ಚಿರಕೀರ್ತಿಗೆ ಭಾಜನರಾದರೂ, ಭಾಷೆಯಲ್ಲಿ ಯಾವ ಸ್ವರವನ್ನೂ– ಅರ್ಧ ಸ್ವರವನ್ನು ಕೂಡಾ ಮಿಡಿಯಬಲ್ಲವರಾದರೂ, ಆ ದಾರಿಯನ್ನೇ ಬಿಟ್ಟುಕೊಟ್ಟು, ಉತ್ತರಾಯುಷ್ಯದಲ್ಲಿ ಸಾಂಖ್ಯದತ್ತ ತಿರುಗಿದರಲ್ಲ– ಏನಿದು ಸೋಜಿಗ! 'ನಾವೀನ್ಯದ ಅನುಕೂಲ' ಎನ್ನುವ ಬೇಂದ್ರೆ ಮಾತು ಬೇಂದ್ರೆಯವರನ್ನೇ ಹಿಂಬಾಲಿಸಿತು! ಸಶರೀರ ಸ್ವರ್ಗಕ್ಕೆ ನಡೆದ ಧರ್ಮರಾಜನ ಹಿಂದೆ ನಾಯಿಯಂತೆ! ನಾವೀನ್ಯಕ್ಕೆ ಭಾಷೆಯ ಹಂಗೂ ಇಲ್ಲ. ಇದು ಬರಿ ಬೆಳಗಲ್ಲೋ ಅಣ್ಣಾ ಎಂದು ಒಮ್ಮೆ ಗುನುಗುನಿಸಿ ಬೇಂದ್ರೆ ಸಾಂಖ್ಯದತ್ತ ನಡೆದಿರಬೇಕು! ಅಡಿಗರು ನವ್ಯದತ್ತ ಬಂದ ನಡೆ, ಬೇಂದ್ರೆ ಸಾಂಖ್ಯದತ್ತ ನಡೆದ ನಡೆ– ಕಣ್ಣೆರಡು; ಕಾಣ್ಕೆ ಎರಡೆ? ಎಂದು ಕೇಳುವಂತಿದೆ.

**–ತೋಷ**

## ಮಾತೇ ಮುತ್ತು

★ ದ್ವೇಷವನ್ನು ದ್ವೇಷದಿಂದ ಕೊನೆಗೊಳಿಸಲು ಆಗುವುದಿಲ್ಲ; ಪ್ರೀತಿಯಿಂದ ಮಾತ್ರ. ಇದು ದೈವಿಕ ನಿಯಮ.

–ಗೌತಮ ಬುದ್ಧ

★ ಒಂದೇ ಒಂದು ನಿಮಿಷ ನೀವು ಸಿಟ್ಟಿಗೆದ್ದರೂ 60 ಸೆಕೆಂಡುಗಳ ಅವಧಿಯ ನಿಮ್ಮ ಸಂತೋಷವನ್ನು ಕಳೆದುಕೊಂಡಂತೆ.

ರಾಲ್ಫ್ ಎಮರ್ಸನ್

★ ಉದಾರ ಮನಸ್ಸಿನಿಂದ ಸಹಾನುಭೂತಿಪರರಾಗಿ ಮಾತನಾಡಿ– ಮುಖ್ಯವಾಗಿ ಸಭೆಗೆ ಗೈರುಹಾಜರಾಗಿರುವವರ ಬಗ್ಗೆ!

–ಗಾಯಥೆ

★ ಜಗತ್ತಿನ ಬಹುತೇಕ ಚಿಂತನೆಗಳೆಲ್ಲವೂ ನಡೆದಾಡುವಾಗ ರೂಪುಗೊಂಡದ್ದು.

–ಫ್ರೆಡ್ರಿಕ್ ನೀಷೆ

★ ಕಲೆಯನ್ನು ಶಾಲೆಯಲ್ಲಿ ಕಲಿಸಲಾಗದು. ಕಲೆ ಎಂದರೆ ನೋಡುವುದು, ಕೇಳುವುದಲ್ಲ. ಕಲೆಯನ್ನು ಬೀದಿಗಳು ಕಲಿಸುತ್ತವೆ.

–ಆಸ್ಕರ್ ವೈಲ್ಡ್

★ ಅವನಿಗೇನೂ ಗೊತ್ತಿಲ್ಲ, ಆದರೆ ಎಲ್ಲ ಗೊತ್ತಿದೆಯೆಂದು ಭಾವಿಸುತ್ತಾನೆ. ರಾಜಕೀಯಕ್ಕೆ ಅವನು ಸೂಕ್ತ ವ್ಯಕ್ತಿ.

–ಜಾರ್ಜ್ ಬರ್ನಾರ್ಡ್ ಷಾ

★ ಭರವಸೆ ಎನ್ನುವುದು ಎಚ್ಚರ ಇರುವ ಮನುಷ್ಯನ ಕನಸು.

–ಅರಿಸ್ಟಾಟಲ್

★ ಪ್ರೇಯಸಿ ಎಂದರೆ ಮದ್ಯದ ಬಾಟಲಿ. ಪತ್ನಿ ಎಂದರೆ ಬಾಟಲಿಯ ಮದ್ಯ.

–ಬೋದಿಲೇರ್

★ ರಾಜಕೀಯದಲ್ಲಿ ಇರುವವರು ಯಾವತ್ತೂ ತಮ್ಮ ತಪ್ಪುಗಳನ್ನು ಒಪ್ಪಿಕೊಳ್ಳಬಾರದು.

–ನೆಪೋಲಿಯನ್ ಬೊನಪಾರ್ಟ್

★ ಒಳ್ಳೆಯ ಮನುಷ್ಯರು ಸುಮ್ಮನೆ ಕುಳಿತರೆ ಕೆಡುಕು ವಿಜೃಂಭಿಸುತ್ತದೆ.

–ಎಡ್ಮಂಡ್ ಬರ್ಕ್